# ಸಾಳೂ

ಅಕ್ಷತಾ ಕೃಷ್ಣಮೂರ್ತಿ



'ಸಾಳೂಗೆ ಈ ಸಲನಾದ್ರೂ ಮದ್ವೆ ಮಾಡಿ. ಎಷ್ಟು ದಿನಾ ಅಂತಾ ತಂಗಿಯನ್ನು ಮನೇಲಿ ಇಟ್ಕೋತ್ತಿರಿ?' ಎಂದು ಈ ಬಾರಿ ಜಾತ್ರೆಗೆ ಬಂದ ಕಾಟ್ಗೋಳಿ ಪಾವ್ಣೆಯ ಅಕ್ಕ ಸಾಳೂವಿನ ಅಣ್ಣಂದಿರಿಗೆ ಜೋರಾಗಿ ಹೇಳುತ್ತಿದ್ದಳು. ಸಾಳೂ ಅಪ್ಪ ತೀರಿಹೋಗಿ ಹತ್ತು ವರ್ಷ ಕಷ್ಟದಲ್ಲಿಯೇ ಜೀವನ ಕಳೆದುಹೋಗಿತ್ತು. ಅವರಿವರ ಮನೆ ಕೆಲಸ ಮಾಡಿ ಒಂದೊಂದು ದಿನ ಉಪವಾಸ ಇದ್ದು ಸಾಳೂವಿನ ಅಮ್ಮ ಮಕ್ಕಳನ್ನೆಲ್ಲ ಓದಿಸಿದ್ದಳು. ಮಗಳ ಜವಾಬ್ದಾರಿ ಬೇಗ ಕಳೆದುಕೊಂಡಷ್ಟು ಸುಖ ಎಂದು ಅಮ್ಮನಿಗೆ ಅನಿಸಿರಬೇಕು. ಅಣ್ಣಂದಿರೆಲ್ಲ ಕಡೆ ಪಕ್ಷ ಒಂದು ಮಾತಿಗಾದ್ರು ಸಾಳೂವಿನ ಒಪ್ಪಿಗೆಯನ್ನು ಕೇಳಲಿಲ್ಲ. ಪಾವ್ಣೆಯವರೆ ಹುಡುಕಿಕೊಟ್ಟ ಹುಡುಗನ ಮುಖ, ತಾವೂ ನೋಡದೆ ಪಾವ್ಣೆಯವರು ಹೇಳಿದ್ದಾರೆಂದು ಜಾತ್ರೆ ಮುಗಿದ ಎರಡು ತಿಂಗಳಿನಲ್ಲಿಯೇ ಮದುವೆ ಮಾಡಿ ಮುಗಿಸಿಬಿಟ್ಟಿದ್ದರು.

***

'ಮುದಿಯಾದ್ರು ಸುಖಾ ಸಿಗಲಾ. ತೊಂದ್ರಿ ತಾಪತ್ರೆ ಕಳ್ದ ಹೋಗ್ಲೆ ಬೊಮ್ಮಯ್ಯ ದ್ಯಾವ್ರೆ. ನಿಂಗೆ ನೂರಾಉಂದ ಕಾಯಿ ಉಡಿಸ್ತಿ' ಎಂದೆಲ್ಲ ಅಂದುಕೊಳ್ಳುತ್ತ ಹಳೆಯ ನೆನಪಲ್ಲಿ ಕಳೆದುಹೋದ ಸಾಳೂವಿಗೆ ಬೆಕ್ಕು ಬಂದು ಮೀನು ಮಡಿಕೆಗೆ ಮುಚ್ಚಿದ ಮುಚ್ಚಳ ಕೆಳಗೆ ಬೀಳಿಸಿದ ಸದ್ದಾದಾಗಲೇ ವಾಸ್ತವಕ್ಕೆ ಬಂದದ್ದು. 'ಹಾಳಾದ ಮೊಳ್ ಬಿಕ್ಕ. ಊರಲ್ಲಿರೂ ನಾಯಿ ನರಿ ನನ್ನೇ ಹುಡಿಕಂಡೆ ಬತ್ತವ್ ಮಡಿ' ಎನ್ನುತ್ತ ಕೋಲು ಹಿಡಿದು ಓಡಿಸಿಕೊಂಡು ಹೋದಳು. ಒಂದು ತಿಂಗಳ ಹಿಂದಷ್ಟೇ ಪಿಕಳಾರ ಹಕ್ಕಿಯೊಂದು ಮನೆಯ ಮುಂದಿನ ಬಣ್ಣದ ಎಲೆಯ ಗಿಡದ ಟೊಂಗೆಗೆ ಗೂಡು ಕಟ್ಟಿತ್ತು. ಪಿಕಳಾರದ ಮರಿ ಹಾರುವವರೆಗೂ ಗೂಡು ಕಾಯುವುದೇ ಸಾಳೂಗೆ ನಿತ್ಯದ ಕೆಲಸವಾಗಿತ್ತು. ಒಂದು ಮುಗಿಯುತ್ತಿದ್ದ ಹಾಗೆ ಮತ್ತೊಂದು ಶುರುವಾಗಿತ್ತು. ಮೊನ್ನೆ ಕಾಯಿ ಕೊಯ್ಯಲು ನಿಂಗ ಕಾಯಿ ಮರ ಹತ್ತಿದರೆ, ಹೆಜ್ಜೇನು ಎನ್ನುತ್ತ ಅವಸರವಸರವಾಗಿ ಮರ ಇಳಿದಿದ್ದ. ಮರಕ್ಕೆ ಎರಡೆರಡು ಜೇನುಗೂಡು. ಯಾಕಾದರೂ ಅವನನ್ನು ಮರ ಹತ್ತಿಸಿದೆ ಅಂದುಕೊಂಡಳು. ಇವೆಲ್ಲ ಕೆಲಸದ ನಡುವೆ ಸಾಳೂಗೆ ಆಗಾಗ ನೀರಡಿಕೆ ಆದಂತಾಗುತ್ತಿತ್ತು. ಪದೇ ಪದೇ ಒಂದಕ್ಕೆ ಬಂದ ಹಾಗೆ ಆಗುತಿತ್ತು, ಬಚ್ಚಲಿಗೆ ಹೋದ್ರೆ ಏನು ಇಲ್ಲ. ಉಚ್ಚೆ ಹೊಯ್ಯಲು ಒಮ್ಮೊಮ್ಮೆ ಕಷ್ಟ. ಹೀಗಾಗಿಯೇ ಸೀಸ್ಸೈಗೆ ಹೋಗಿ ಬರಲೇಬೇಕೆಂದು ತೀರ್ಮಾನಿಸಿದಳು.

ಬೆಳಕು ಹರಿಯುವ ಮೊದಲೇ ಅಡಿಗೆ ಎಲ್ಲಾ ಮುಗಿಸಿ ಹೋಗಬೇಕು. ಮೂರುವರೆಗೆ ಎದ್ದು ಒಲೆ ಹಚ್ಚಿದರೂ ಇನ್ನೂ ಅನ್ನ ಆಗಿರಲಿಲ್ಲ. ಅಂತೂ ಅಡುಗೆ ಮುಗಿಸಿ ತನ್ನ ಕೋಲಿನಂತಹ ಮೈಗೆ ಒಂದು ಸೀರೆ ಸುತ್ತಿಕೊಂಡು ಸಾಳೂ ಮನೆ ಬಾಗಿಲು ಸಾವಕಾಶ ಚಾಚಿದಳು. ರಾತ್ರಿಯೇ ಅತ್ತೆಗೆ ತಾನು ಡಿಗ್ಗಿಯಲ್ಲಿರುವ ಅಕ್ಕನ ಮನೆಗೆ ಹೋಗಿ ಬರುವುದಾಗಿ ಸುಳ್ಳು ಹೇಳಿದ್ದಳು. ಜೀಪು ಇರುವ ಬುಧವಂತನ ಮನೆ ದೂರವಿತ್ತು.